ಕ್ರ ಸಂ.	ಹೆಸರು ಮತ್ತು ಪದನಾಮ		ಸಹಿ
4	ಅಬ್ದುಲ್ ವಾಜಿದ್	ಸದಸ್ಯರು	
5	ಇರ್ಷಾದ್ ಬೇಗಂ	ಸದಸ್ಯರು	Irshad Beg.
6	ಆರ್.ರಮಿಳ ಉಮಾಶಂಕರ್	ಸದಸ್ಯರು	Ramilakumar Hankal
7	ಹನುಮಂತಯ್ಯ	ಸದಸ್ಯರು	
8	ಸುಪ್ರಿಯಾ ಶೇಖರ್	ಸದಸ್ಯರು	
9	ಆರ್.ರೇಖಾ	ಸದಸ್ಯರು	
10	ಎಂ.ಮಾಲತಿ	ಸದಸ್ಯರು	M. Malathi
11	ಡಾ: ಎಸ್.ರಾಜು	ಸದಸ್ಯರು	

ಸದರಿ ಏಕೈಕ ಬಿಡ್‌ದಾರರಾದ ಶ್ರೀ.ಉದಯಶೆಟ್ಟಿ, ರವರು ವ್ಯತ್ಯಾಸ ಮೊತ್ತದ ಡಿ.ಡಿ.ಯನ್ನು ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಹೆಸರಿನಲ್ಲಿ ಪಡೆದು ಟೆಂಡರ್ ಬಿಡ್ ಸಲ್ಲಿಸುವ ಸಮಯದಲ್ಲಿ Scan ಮಾಡಿ Upload ಮಾಡಿರುತ್ತಾರೆ.

ಆದುದರಿಂದ, ಸದರಿ ಕಾಮಗಾರಿಯು ಸಾರ್ವಜನಿಕರ ಸೇವಾ ಹಿತದೃಷ್ಟಿಯಿಂದ ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ ಸದರಿ ಕಾಮಗಾರಿಯ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆಯನ್ನು ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯಿಂದ ಮಂಜೂರಾತಿ ನಿರೀಕ್ಷಿಸಿ, ಟೆಂಡರ್ ಕರೆಯಲಾಗಿರುವುದರಿಂದ, ಈಗ ಸದರಿ ಕಾಮಗಾರಿಯ ರೂ.200.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆಗಾಗಿ ಹಾಗೂ ಏಕೈಕ ಬಿಡ್‌ದಾರರಾದ ಶ್ರೀ.ಉದಯಶೆಟ್ಟಿ, ರವರು ನಮೂದಿಸಿರುವ ಟೆಂಡರ್ ಮೊತ್ತವಾದ ರೂ.1,95,09,911/- ಗಳಿಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕರ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ದಿನಾಂಕ: 21-06-2016ರ ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ

ನಿರ್ಣಯ:- ವಿಶೇಷ ಆಯುಕ್ತರು(ಯೋಜನೆ) ರವರ ದಿ/21/06/16ರ ಟಿಪ್ಪಣಿಯಂತೆ ಸಮಿತಿಯು ಒಪ್ಪಿದೆ.

ಅಧ್ಯಕ್ಷರು
ಬೃ. ಸಾ. ಕಾ. ಸ್ಥಾ. ಸ.

ಕ್ರ ಸಂ.	ಹೆಸರು ಮತ್ತು ಪದನಾಮ		ಸಹಿ
1	ಕೆ.ದೇವದಾಸ್	ಅಧ್ಯಕ್ಷರು	
2	ಮಹದೇವಮ್ಮ ನಾಗರಾಜ್	ಸದಸ್ಯರು	ಮಹದೇವಮ್ಮ ನಾಗರಾಜ್
3	ಪಿ.ಸೌಮ್ಯ	ಸದಸ್ಯರು	Soumya P

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯು ದಿನಾಂಕ:08-07-2016ರಂದು ನಡೆಸಲಾದ ಸಭೆಯ ನಡವಳಿಗಳು

ವಿಷಯ ಸಂಖ್ಯೆ: ಬೃ.ಸಾ.ಕಾ.ಸ್ಥಾ.ಸ:/35/2016-17

ವಿಶೇಷ ಆಯುಕ್ತರು(ಯೋಜನೆ) ರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, Widening of Major Sandeep Unnikrishnan Road from Doddaballapura Road to Yelahanka Bus stand road towards BWSSB Water tank side in ward No.04 ಕಾಮಗಾರಿಯನ್ನು ಅಂದಾಜು ಪಟ್ಟಿಯ ಮೊತ್ತ ರೂ.200.00 ಲಕ್ಷಗಳ ವೆಚ್ಚದಲ್ಲಿ ಯಲಹಂಕ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹೊಸದಾಗಿ ಸೇರ್ಪಡೆಗೊಂಡ ನಗರ ಸಭೆ ಮತ್ತು ಪುರ ಸಭೆಗಳ ವಿಶೇಷ ಅನುಧಾನದಲ್ಲಿ ಪಿ ಕೋಡ್ ಸಂಖ್ಯೆ:ಪಿ3089 ರಡಿಯಲ್ಲಿ ಕೈಗೆತ್ತಿಕೊಳ್ಳಲಾಗಿರುತ್ತದೆ. ಸದರಿ ಕಾಮಗಾರಿಗೆ ಜಾಬ್‌ಕೋಡ್ ಸಂಖ್ಯೆ:004-16-000001 ದೊರೆತ್ತಿರುತ್ತದೆ.

ಮುಂದುವರೆದಂತೆ, ಮಾನ್ಯ ಶಾಸಕರು, ಯಲಹಂಕ ವಿಧಾನಸಭಾ ಕ್ಷೇತ್ರ ರವರು ಮೇಜರ್ ಸಂದೀಪ್ ಉನ್ನಿಕೃಷ್ಣನ್ ರಸ್ತೆಯ ಸ್ಥಳ ತಪಾಸಣೆ ಕೈಗೊಂಡ ಸಂಧರ್ಭದಲ್ಲಿ ಪ್ರಸ್ತಾಪಿತ ಕಾಮಗಾರಿಯಲ್ಲಿ ಅಗಲೀಕರಣದ ಅಂಶವಿದ್ದು, ಅದರಂತೆ, ಅಂದಾಜು ಪಟ್ಟಿಯನ್ನು ತಯಾರಿಸಲು ಪತ್ರದ ಮುಖೇನ ಸೂಚಿಸಿರುತ್ತಾರೆ.

ಮಾನ್ಯ ಶಾಸಕರ ಕೋರಿಕೆ ಮೇರೆಗೆ, ಸದರಿ ಕಾಮಗಾರಿಗೆ 2015-16ನೇ ಸಾಲಿನ ಲೋಕೋಪಯೋಗಿ ಇಲಾಖೆ ದರಗಳನ್ವಯ ಅತ್ಯವಶ್ಯಕ ಅಂಶಗೊಳಗೊಂಡಂತೆ ಅಂದಾಜು ಪಟ್ಟಿಯನ್ನು ರೂ.200.00 ಲಕ್ಷಗಳಿಗೆ ತಯಾರಿಸಲಾಗಿರುತ್ತದೆ.

ಸದರಿ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು, ಯೋಜನೆ - ಯಲಹಂಕ ವಿಭಾಗ ರವರು ದಿನಾಂಕ:05.04.2016 ರಂದು ಟೆಂಡರ್ ಆಹ್ವಾನಿಸಿದ್ದು, ತಾಂತ್ರಿಕ ಬಿಡ್‌ಅನ್ನು ದಿನಾಂಕ:30.04.2016 ರಂದು ತೆರೆದಿರುತ್ತಾರೆ. ಸದರಿ ಟೆಂಡರ್‌ನಲ್ಲಿ ನಾಲ್ಕು ಬಿಡ್‌ದಾರರು ಭಾಗವಹಿಸಿದ್ದು, ಮೂವರು ಬಿಡ್‌ದಾರರು ತಾಂತ್ರಿಕ ಮೌಲ್ಯಮಾಪನದಲ್ಲಿ ಅರ್ಹತೆ ಹೊಂದಿರುತ್ತಾರೆ. ಅದರಂತೆ, ಅರ್ಹತೆ ಹೊಂದಿರುವ 3 ಬಿಡ್‌ದಾರರ ಆರ್ಥಿಕ ಬಿಡ್ ತರೆಯಲು ಮುಖ್ಯ ಅಭಿಯಂತರರು, ಯಲಹಂಕ ವಲಯ ರವರು ಅನುಮೋದಿಸಿರುವುದರಿಂದ ದಿನಾಂಕ:04.06.2016 ರಂದು ಅರ್ಹ ಬಿಡ್‌ದಾರರಾದ ಆರ್ಥಿಕ ಬಿಡ್‌ಅನ್ನು ತೆರೆಯಲಾಗಿರುತ್ತದೆ. ಈ ಪ್ರಕ್ರಿಯೆಯಲ್ಲಿ 3 ಬಿಡ್‌ದಾರರು ಭಾಗವಹಿಸಿದ್ದು, ಮೊದಲ ಇಬ್ಬರು ಬಿಡ್‌ದಾರರು ಕಡಿಮೆ ದರಗಳನ್ನು ನಮೂದಿಸಿರುತ್ತಾರೆ. ಆದರೆ, ವ್ಯತ್ಯಾಸದ ಮೊತ್ತದ ಡಿ.ಡಿ ಯನ್ನು ಟೆಂಡರ್ ಬಿಡ್ ಸಲ್ಲಿಸುವ ಸಮಯದಲ್ಲಿ ಸ್ಕ್ಯಾನ್ ಮಾಡಿ ಉಪಲೋಡ್ ಮಾಡಿಲ್ಲದ ಕಾರಣ ಸದರಿ ಬಿಡ್‌ದಾರರ ಟೆಂಡರ್‌ಅನ್ನು ಅಸಿಂಧುಗೊಳಿಸಿರುತ್ತಾರೆ. ಉಳಿದ ಏಕೈಕ ಬಿಡ್‌ದಾರರ ವಿವರ ಕೆಳಕಂಡಂತೆ ಇರುತ್ತದೆ.

ಕ್ರ.ಸಂ	ಗುತ್ತಿಗೆದಾರರ ಹೆಸರು	ಟೆಂಡರ್‌ಗಿಟ್ಟ ಮೊತ್ತ (ರೂ.ಗಳಲ್ಲಿ) 2015-16ನೇ ಸಾಲಿನ ದರ ಪಟ್ಟಿಯಂತೆ	ಗುತ್ತಿಗೆದಾರರು ನಮೂದಿಸಿದ ಮೊತ್ತ (ರೂ.ಗಳಲ್ಲಿ)	ಗುತ್ತಿಗೆದಾರರು ನಮೂದಿಸಿದ ಮೊತ್ತವನ್ನು ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡವಾರು
1	ಶ್ರೀ.ಉದಯಶೆಟ್ಟಿ	1,96,03,230.59	1,95,09,911.52	0.47% ಕಡಿಮೆ -